**ಸಾಕ್ಷಿಗೆ ದಿನಾಂಕಃ12-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 8 ಎ ರಿಂದ ಡಿ ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ. BNK ವಕೀಲರಿಂದ ::**

ಈ ದಾವೆ ಹೂಡಲು ನನ್ನ ತಂದೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಸುಮಾರು 80 ವರ್ಷ ದಾಟಿರುತ್ತದೆ. ನನ್ನ ತಂದೆ ಈಗ ಭದ್ರಾವತಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಅವರ ಆರೋಗ್ಯ ಪರಿಸ್ದಿತಿ ಒಳ್ಳೆಯ ರೀತಿ ಇರುವುದಿಲ್ಲ. ನನ್ನ ತಂದೆಗೆ 2 ವರ್ಷದ ಹಿಂದೆ  ಮಿದುಳಿನ Surgery ಆಗಿರುತ್ತದೆ. ನನ್ನ ತಂದೆಯ ಆರೋಗ್ಯ ಪರಿಸ್ದಿತಿಯ ಬಗ್ಗೆ ನನ್ನ ಬಳಿ ದಾಖಲಾತಿಗಳು ಇರುತ್ತವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆ ಈಗಲೂ ಸಹ ದನ ಕಾಯುವ ಕೆಲಸ ಮಾಡುತ್ತಾರೆ ಹಾಗೂ ನಮ್ಮ ಹೋಟೇಲ್ ನಲ್ಲಿ ನಮಗೆ ಸಹಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾದರೆ ಸತ್ಯಾಂಶ ಹೊರ ಬರುತ್ತದೆ ಎನ್ನುವ ಕಾರಣದಿಂದ ಅವರನ್ನು ಈ ದಾವೆಯಲ್ಲಿ ಸಾಕ್ಷಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 7 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ತಂದೆಯು ದಾವಾ ಶೆಡ್ಯೂಲ್ ಸ್ವತ್ತು ಅವರ ಜಮೀನು ಆದ ಕಾರಣ ಅದರ ಮಾಲೀಕತ್ವ ಹಾಗೂ ಸ್ವಾಧೀನಕ್ಕೆ ಅದರಲ್ಲಿ ಸಹೋದರರ ಭಾಗ ಇರುವ ಕಾರಣ ಈ ದಾವೆಯನ್ನು ಹೂಡಿರುತ್ತಾರೆ. ನಮ್ಮ ಪ್ರಕಾರ ಎಲ್ಲಾ ಪ್ರತಿವಾದಿಗಳು ಅಮ್ಮಯ್ಯ ಎನ್ನುವವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಹೆಸರು ನಂಜುಂಡಯ್ಯ ಮತ್ತು ನಂಜಯ್ಯ ಎಂದು ಇರುವ ಬಗ್ಗೆ ನ್ಯಾಯಾಲಯಕ್ಕೆ ನಾನು ಒಂದು ಅಫಿಡವಿಟ್ ಅನ್ನು ಸಲ್ಲಿಸಿರುತ್ತೇನೆ. ಅದನ್ನು ಹೊರತುಪಡಿಸಿ ಆ ಬಗ್ಗೆ ನಮ್ಮ ಬಳಿ ಯಾವುದೇ ಸರ್ಕಾರಿ ದಾಖಲಾತಿಗಳು ಇರುವುದಿಲ್ಲ.

ನಮ್ಮ  ಹಾಗೂ ಪ್ರತಿವಾದಿಗಳ ಕುಟುಂಬ ಜಂಟಿ ಕುಟುಂಬವಾಗಿತ್ತು ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ನಾನು ಹೇಳುತ್ತಿರುವ ವಂಶವೃಕ್ಷವನ್ನು ನನ್ನ ತಂದೆ ಮಾಡಿಸಿರುತ್ತಾರೆ. ಆ ರೀತಿ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಹಾಗೂ ಪ್ರತಿವಾದಿಗಳ ಜಂಟಿ ಕುಟುಂಬದಲ್ಲಿ ಒಟ್ಟು

ಕುಟುಂಬದ ಆಸ್ತಿಗಳು ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಆ ಬಗ್ಗೆ ಕೈ ಬರಹದ ಪಹಣಿಗಳು, ಆರ್ ಆರ್ 5 ಮತ್ತು 6 ಮತ್ತು ಎಂ ಆರ್ ಅನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬದಲ್ಲಿ ಪ್ರಸ್ತುತದಲ್ಲಿ ಯಾವುದೇ ಜಾಗ ಇರುವುದಿಲ್ಲ. ಆದರೆ ಹಿಂದೆ ಸಿದ್ದರಹಳ್ಳಿ ಗ್ರಾಮದ ಸರ್ವೇ ನಂಬರ್ 7 ರಲ್ಲಿ 3 ಎಕರೆ 14 ಗುಂಟೆ ಜಮೀನು ಮತ್ತು ಅದೇ ಗ್ರಾಮದ ಸರ್ವೇ ನಂಬರ್ 6 ರಲ್ಲಿ 3 ಎಕರೆ 3 ಗುಂಟೆ ಜಮೀನು ಇತ್ತು ಎಂದು ನುಡಿಯುತ್ತಾರೆ.

ನನ್ನ ತಂದೆ ಹಿಂದೆ ಗೇರಮರಡಿ ಗ್ರಾಮದ ಸರ್ವೇ ನಂಬರ್ 40/2 ರಲ್ಲಿ 2 ಎಕರೆ ಸ್ವತ್ತನ್ನು ಎಂ ಆರ್ 11/1993-94 ರಂತೆ ಅವರ ಹೆಸರಿಗೆ ಖಾತ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಈಗ ಹೇಳಿದ ಆಸ್ತಿಗೆ ಸಂಬಂಧಪಟ್ಟ ಎಂ ಆರ್ ಅನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸದರಿ ಆಸ್ತಿಯ 6 ಕೈ ಬರಹದ ಪಹಣಿಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಒಪ್ಪಿದ ಕಾರಣ ಅವುಗಳನ್ನು ನಿಡಿ2 ರಿಂದ 7 ಎಂದು ಗುರುತಿಸಲಾಯಿತು. ಸದರಿ ಸ್ವತ್ತನ್ನು ನನ್ನ ತಂದೆ 15.04.1996 ರಲ್ಲಿ ಬೆಟ್ಟದಹಳ್ಳಿ ವಾಸಿ ನೀಲಕಂಠಪ್ಪ ರವರ ಮಗ ಮಲ್ಲಿಕಾರ್ಜುನ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನನ್ನ ತಂದೆ ಹಾಗೂ ಅವರ ಮಕ್ಕಳಾದ ನಾಗರಾಜ, ರೇಖಾ ಮತ್ತು ಚಂದ್ರಯ್ಯ ರವರು ಸೇರಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಸದರಿ ಕ್ರಯಕ್ಕೆ ಸಂಬಂಧಪಟ್ಟ ಕ್ರಯಪತ್ರದ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ8 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ ಮತ್ತು ಅದನ್ನು ಬೇರೆ ಒಬ್ಬರಿಂದ ದಾನವಾಗಿ ಪಡೆದಿದ್ದರು ಎಂದು ನುಡಿದಿರುತ್ತಾರೆ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಕಾರಣ ಅದನ್ನು ಬಾಯಿ ಮಾತಿನಲ್ಲಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ8 ರಲ್ಲಿ ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿತ್ತು ಎಂದು ಎಲ್ಲೂ ಬರೆದಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ಸುಳ್ಳಾಗಿ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಿದ್ದು ಆದರೆ ಈ ದಾವೆಯಲ್ಲಿನ ಆಸ್ತಿಯು ನಮಗೆ ಸಂಬಂಧ ಇಲ್ಲದಿದ್ದರೂ ಸುಳ್ಳಾಗಿ ನಮ್ಮ ಹಾಗೂ

ಪ್ರತಿವಾದಿಗಳ ಆಸ್ತಿ ಎಂದು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಸುಳ್ಳು ವಂಶವೃಕ್ಷಗಳನ್ನು ಹಾಜರುಪಡಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು ನನ್ನ ಅಜ್ಜನಿಗಾಗಲೀ ಅಥವಾ ಮುತ್ತಜ್ಜನಿಗಾಗಲೀ ಸೇರಿತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತು 8 ನೇ ಪ್ರತಿವಾದಿಗೆ ಖಾತೆ ಬದಲಾವಣೆ ಆದ ಬಗ್ಗೆ ನನ್ನ ತಂದೆ ಎ ಸಿ ರವರ ಸಮಕ್ಷಮ ಪ್ರಶ್ನೆ ಮಾಡಿರುತ್ತಾರೆ ಮತ್ತು ಅದು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಕೇವಲ ಪ್ರಶ್ನೆ ಮಾಡಿರುತ್ತಾರೆ ಅದು ವಜಾ ಆಗಿರುವುದಿಲ್ಲ, ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಪಡೆಯುವಂತೆ ನಮಗೆ ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ಧ ನಮಗೆ ಡಿಸಿ ರವರ ಸಮಕ್ಷಮ ಮೇಲ್ಮನವಿ ಸಲ್ಲಿಸುವ ಅವಕಾಶ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನಗೂ ಹಾಗೂ ಶೇಖರಯ್ಯ ರವರ ಮಗಳು ರೇಖಾ ಎನ್ನುವವರಿಗೆ ಸಂಬಂಧ ಇಲ್ಲದಿದ್ದರೂ ನಾನೇ ರೇಖಾ ಎಂದು ಹೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಶೇಖರಯ್ಯ ರವರ ಅಜ್ಜನ ಹೆಸರು ಸಿದ್ದಯ್ಯ ಆಗಿರುತ್ತದೆ ಎಂದರೆ ಸರಿ. ಮಹೇಶ್ವರಯ್ಯ ರವರ ಅಜ್ಜನ ಹೆಸರು ಜಟ್ಟಿ ಬಸಯ್ಯ ಆಗಿರುತ್ತದೆ ಎಂದರೆ ಸರಿ.

ದಾವಾ ಶೆಡ್ಯೂಲ್ ಸ್ವತ್ತಿನ ಮುಂಚಿನ ವಿಸ್ತೀರ್ಣ 6 ಎಕರೆ 11 ಗುಂಟೆ ಆಗಿತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಜಟ್ಟಿ ಬಸಯ್ಯ ರವರು 3 ಎಕರೆ 8 ಗುಂಟೆ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿ ಊರು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಜಟ್ಟಿ ಬಸಯ್ಯ ರವರಿಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಬಾರಿ ದೂರದ ಸಂಬಂಧ ಇರುತ್ತದೆ ಎಂದು ನುಡಿಯುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: